ಪದವಿಗಳು, ಅಲಂಕರಿಸಿದ ಹುದ್ದೆಗಳು, ವ್ಯಕ್ತಿತ್ವದ ಗುಣವಾಚಕಗಳನ್ನು ಸೇರಿಸಿ ಸಂಬೋಧಿಸುವುದರಲ್ಲಿ ಐದುನಿಮಿಷ ಕಳೆಯಿತು. ತರುವಾಯ ವಾನರ ಸೇವಾಸಂಘದ ಚಾರಿತ್ರಿಕ ಹಿನ್ನೆಲೆ, ಪದೇಪದೇ ಸ್ಥಳಾಂತರಗೊಳ್ಳಬೇಕಾದ ಸಂಘದ ಭೌಗೋಳಿಕ ವಿವರಗಳು, ಎದುರಿಸಬೇಕಾದ ಆರ್ಥಿಕ ಸವಾಲುಗಳು, ಹಾಗಿದ್ದೂ ನಡೆಸುತ್ತಿರುವ ಸಾಹಿತ್ಯಸೇವೆಯನ್ನು ವಿವರಿಸಿ ದೊಡ್ಡವರಿಂದ ಹಿಡಿದು ಚಿಳ್ಳೆಪಿಳ್ಳೆಗಳವರೆಗೂ ಸ್ವಾಗತ ಕೋರಿ ವಿಶ್ರಮಿಸಿದಾಗ ಅರ್ಧಗಂಟೆ ಕಳೆದಿತ್ತು.

ಸಭಾಧ್ಯಕ್ಷರು ತುರ್ತಾಗಿ ಹೋಗಬೇಕಾಗಿರುವುದರಿಂದ ಪ್ರಶಸ್ತಿ ಪ್ರದಾನ ಮುಂದೂಡಲಾಗಿದೆ, ಈಗ ಅಧ್ಯಕ್ಷರ ಭಾಷಣ ಎಂದು ನಿರೂಪಕ ಘೋಷಿಸಿದ. ಆಧ್ಯಕ್ಷರೂ ಹನುಮೇಶಯ್ಯನಂತೆ ಐದುನಿಮಿಷ ಸಂಬೋಧನಾ ಪ್ರವರ ಮಾಡಿ ತಮ್ಮ ಆತ್ಮಚರಿತ್ರೆ ಆರಂಭಿಸುತ್ತಲೇ ಮುಂದಿನ ಸಾಲಿನಲ್ಲಿದ್ದ ನನ್ನ ಮಾವಯ್ಯ ಹಿಂದೆ ತಿರುಗಿ ತಮ್ಮ ತೋರುಬೆರಳಿನಿಂದ ನನ್ನನ್ನು ಕರೆದರು.

'ಆಗ್ಲೆ ನಾಲ್ಕು ಗಂಟೆಯಾಯ್ತು. ಇದು ನಾನು ಕಾಫಿ ಕುಡಿಯೋ ಹೊತ್ತು. ಈಗ ಕುಡೀದಿದ್ರೆ ತಲೆನೋವು ಗ್ಯಾರಂಟಿ. ಇಲ್ಲೆಲ್ಲಾದ್ರು ಕಾಫಿ ಸಿಗತ್ಯೇ?'

ಹಿರಿಯರು. ಮೇಲಾಗಿ ನನಗಾಗಿ ಇಲ್ಲಿಯವರೆಗೆ ವಿಶ್ವಾಸವಿಟ್ಟು ಬಂದಿದ್ದಾರೆ. ಅವರ ಆರೋಗ್ಯ ಗಮನಿಸುವುದು ನನ್ನ ಧರ್ಮ ಎಂದುಕೊಂಡು ಕ್ಯಾಂಟೀನಿಗೆ ಕರೆದೊಯ್ದೆ. ಕಾಫಿ ಎಂದೊಡನೆ ಬರೀ ಕಾಫಿಗೆ ಮುಗಿಯುತ್ಯೇ? ವಿಪರೀತ ಬಾಯಿ ಚಪಲ ಬೇರೆ. ಒಂದು ಪ್ಲೇಟ್ ಗೋಡಂಬಿ ಪಕೋಡ ತರಿಸಿಕೊಂಡು ಕೃತಕ ದಂತಪಂಕ್ತಿಯಿಂದ ಸಶಬ್ದವಾಗಿ ಅಗಿಯುತ್ತಾ ನಡುನಡುವೆ ಕಾಫಿ ಗುಟುಕರಿಸುತ್ತಾ ಹದಿನೈದು ನಿಮಿಷ ಕಳೆದರು. ನಾನು ಮಾತ್ರ ಪ್ರಶಸ್ತಿ ಪ್ರದಾನ ನಾನಿಲ್ಲದಾಗ ಎಲ್ಲಿ ನಡೆದುಬಿಡುತ್ತೋ ಎಂದು ಚಡಪಡಿಸಿದೆ.

ಕೊನೆಗೂ ಹಿಂದಿರುಗಿದಾಗ ಮೊದಲನೆಯ ಅತಿಥಿ ಎದ್ದು ನಿಂತು ವೇದಿಕೆಯನ್ನಲಂಕರಿಸಿದ್ದ ಗಣ್ಯರ ಐದುನಿಮಿಷದ ಸಂಬೋಧನೆ ಆರಂಭಿಸಿದ್ದರು. ಇಪ್ಪತ್ತು ನಿಮಿಷಗಳ ಕೊರೆತವಾಯಿತು. ಕ್ಯೂನಲ್ಲಿದ್ದ ಎರಡನೆಯ ಅತಿಥಿ ತಮ್ಮ ಸಂಬೋಧನೆ ಆರಂಭಿಸುವಲ್ಲಿ ನನ್ನ ವಾರಗಿತ್ತಿ ಕಣ್ಸನ್ನೆ ಮಾಡಿ ಕರೆದಳು. ಅವಳ ಐದುವರ್ಷದ ಮಗ ಈಗ್ಲೆ ಚಾಕ್ಲೇಟು ಕೊಡ್ಸು ಇಲ್ದಿದ್ರೆ ಕಿರುಚಿಕೋತೀನಿ ಎಂದು ಬೆದರಿಕೆ ಹಾಕಿದನಂತೆ. 'ನಾನೆ ಕೊಡಸ್ತೀನಿ ಬಾರೋ ಅಂದ್ರೆ ಒಪ್ತಾ ಇಲ್ಲ ಮುಂಡೇದು. ಇಲ್ಲಿಗೆ ಕರ್ಕೊಂಡು ಬಂದಿರೋದು ದೊಡ್ಡಮ್ಮ. ಅವ್ರೇ ಕೊಡಸ್ಲಿ ಅಂತ ಹಟ ಮಾಡ್ತಾನೆ' ಎಂದು ಮಗನನ್ನು ನನ್ನ ಕೈಗೆ ರವಾನಿಸಿ ಕೈತೊಳೆದುಕೊಂಡಳು. ಹುಡುಗನ ಕೈ ಹಿಡಿದು ಹೊರಬಂದೆ. ಮೇನ್ ರೋಡಿನಲ್ಲಿದ್ದ ಅಂಗಡಿಯಲ್ಲಿ ಚಾಕ್ಲೇಟ್ ಕೊಂಡು ಕೊಟ್ಟೆ. ಐಸ್ ಕ್ರೀಮ್ ಕೊಡ್ಸು ಇಲ್ದಿದ್ರೆ ಒಳಗೆ ಹೋದ್ಮೇಲೆ ಮತ್ತೆ ಕಿರಚ್ತೀನಿ ಎಂದ ಭಯೋತ್ಪಾದಕ. ಅದನ್ನು ತೆಗೆಸಿಕೊಟ್ಟೆ. ಅದೆಲ್ಲಿ ಮುಗಿದು ಹೋಗುತ್ತೋ ಎಂದು ಸ್ವಲ್ಪಸ್ವಲ್ಪವೇ ನೆಕ್ಕುತ್ತಾ ಮುಂದಿನ ಅರ್ಧಗಂಟೆ ಕಳೆದ. ಸಭಾಂಗಣಕ್ಕೆ ಬಂದಾಗ ಐದನೆಯ ಅತಿಥಿ ತಮ್ಮ ಮುತ್ತಿನಂತಹ ಮಾತುಗಳನ್ನು ಕಾಲದ ಪರಿವೆಯೇ ಇಲ್ಲದೆ ಉದುರಿಸುತ್ತಿದ್ದರು. ಸಭಿಕರಲ್ಲಿ ಹೆಚ್ಚಿನವರು ತೂಕಡಿಸುತ್ತಿದ್ದರೆ ಮಿಕ್ಕವರು ತಮ್ಮತಮ್ಮಲ್ಲೇ ಮಾತುಕತೆಯಲ್ಲಿ ತೊಡಗಿಕೊಂಡಿದ್ದರು. ಭಾಷಣಕಾರರು ಮಾತ್ರ ಸರದಿಯಂತೆ ಬಂದು ಕೊರೆದು ಹೊಗುತ್ತಿದ್ದರು.

ನನ್ನ ದೊಡ್ಡಮ್ಮ ಮುಂದೆಬಗ್ಗಿ ಸಂಕೋಚದಿಂದಲೇ ಕಿವಿಯಲ್ಲುಸುರಿದರು, 'ಅರ್ಜೆಂಟ್ ಕಣೇ. ಇಲ್ಲೆಲ್ಲಾದ್ರೂ ಟಾಯ್ಲೆಟ್ ಇದೆಯಾ?' ಮೊದಲೇ ಮಂಡಿನೋವಿನಿಂದ ಕುಂಟುವವರು. ಅಲ್ಲೆಲ್ಲಾದರೂ ಬಿದ್ದುಗಿದ್ದು... ಗ್ರಹಚಾರ. ಮೇಲೆದ್ದು ಅವರ ಕೈಹಿಡಿದು ಹೊರನಡೆದೆ. ಸುಳಿವು ಸಾಂಕ್ರಾಮಿಕ ರೋಗದಂತೆ ಹರಡಿತು. ನಮ್ಮತ್ತೆ, ಚಿಕ್ಕಮ್ಮ, ಸೋದರತ್ತೆ, ಅತ್ತಿಗೆಮ್ಮ, ಹಿರಿಯ ವಾರಗಿತ್ತಿ ಎಲ್ಲರೂ ಅರ್ಜೆಂಟ್‌ನವರೇ. ಹಿಂಬಾಲಿಸಿ ಬಂದರು. ಯಾರಿಗೂ ಸಭಾಂಗಣಕ್ಕೆ